3

# ನಮ್ಮ ಮಹಾಯಾಜಕನಾದ, ಕ್ರಿಸ್ತನು

## (4:14-16; 5:1-10; 7:1-28; 8:1, 2)

ಜನರನ್ನು ದೇವರ ಬಳಿಗೆ ತರುವದೇ ಅನೇಕ ಧರ್ಮಗಳ ವ್ಯವಹಾರವಾಗಿರುತ್ತದೆ. ಅಥವಾ ದೇವರನ್ನು ಜನರ ಬಳಿಗೆ ತರುವದೇ ಆಗಿರುತ್ತದೆ. ಈ ಕಾರ್ಯವನ್ನು ಮಾಡುವದಕ್ಕಾಗಿ, ದೇವರ ಮತ್ತು ಮನುಷ್ಯರ ನಡುವೆ ಮಧ್ಯಸ್ತಗಾರರನ್ನು ನೇಮಿಸಿರುತ್ತಾರೆ. ಇಬ್ರಿಯರ ಪತ್ರಿಕೆಯಲ್ಲಿ, ಕ್ರೈಸ್ತರಾದ ನಮಗೆ ಕ್ರಿಸ್ತನು ಎಂಬ ಮಹಾಯಾಜಕನು ಇದ್ದಾನೆ ಎಂದು ತಿಳಿಸಲಾಗಿದೆ!

ಕ್ರಿಸ್ತನು ಎಂಬ ಮಹಾಯಾಜಕನ ವಿಷಯವೇ, ಇಬ್ರಿಯ ಪುಸ್ತಕದ ಮುಖ್ಯ ಅಂಶವಾಗಿದೆ. ಸತ್ಯವೇದದಲ್ಲಿ ಈ ಕುರಿತಾಗಿ ಆಗಾಗ್ಗೆ ಬರೆದಿರುವದರಿಂದ ಈ ವಿಚಾರವೇನು ಎಂಬ ಪ್ರಶ್ನೆ ಉಂಟಾಗುತ್ತದೆ. ಇಬ್ರಿಯ ಬರಹಗಾರನು ಈ ವಿಚಾರದ ಕುರಿತು ಇಬ್ರಿಯ 8:1ರಲ್ಲಿ ತಿಳಿಸಿದ್ದಾನೆ.

> ನಾವು ಈಗ ಹೇಳುವ ಸಂಗತಿಗಳಲ್ಲಿ ಮುಖ್ಯವಾದ ಮಾತೇನಂದರೆ - ಪರಲೋಕದೊಳಗೆ ಮಹತ್ವವುಳ್ಳ ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾದಂಥ ಮಹಾಯಾಜಕನು ನಮಗಿದ್ದಾನೆ.

ಮಹತ್ವವುಳ್ಳ ದೇವರ ಬಳಿಯಲ್ಲಿ ಇಂಥಾ ಶ್ರೇಷ್ಟನಾದ ಮಹಾಯಾಜಕನು ನಮಗಾಗಿ ಇರುವನು ಎಂದು ಬರಹಗಾರನು ಒತ್ತಿ ಹೇಳುತ್ತಿರುವನು. ಹೌದು ಜನರು ಜಾರಿಬೀಳದಂತೆ ಎಚ್ಚರವಿರಬೇಕು ಹಾಗೂ, ಅದಕ್ಕೆ ಅವರಿಗೆ ಸಹಾಯಕ್ಕಾಗಿ ಕ್ರಿಸ್ತನ ಮಹಾಯಾಜಕತ್ವವು ಲಭ್ಯವಿದೆ ಎಂಬುದು ಮುಖ್ಯ ತಾತ್ಪರ್ಯವಾಗಿದೆ.[1]

ಕ್ರಿಸ್ತನ ಯಾಜಕತ್ವದ ಬಗ್ಗೆ ಈ ಪುಸ್ತಕದ 5 ಮತ್ತು 7ನೇ ಅಧ್ಯಾಯದಲ್ಲಿ ಹೇಳಿರುವ ವಿಷಯವನ್ನು ಗಮನಿಸೋಣ. “ಕ್ರಿಸ್ತನು ಹಾಗೂ ನಮ್ಮ ಮಹಾಯಾಜಕನು ಎಂಬ ವಿಷಯವು ನಮ್ಮ ಜೀವಿತದಲ್ಲಿ ಯಾವ ವಿಧವಾದ ಪರಿಣಾಮಗಳನ್ನು ಬೀರಬಹುದು ಎಂಬದನ್ನೂ ಅಲೋಚಿಯೋಣ?”

### ಕ್ರಿಸ್ತನು ನಮ್ಮ ಕುರಿತು ಅನುತಾಪ ಪಡುತ್ತಾನೆ

ಮೊದಲನೆಯದಾಗಿ, ಕ್ರಿಸ್ತನು ನಮ್ಮ ಬಲಹೀನತೆಯ ಕುರಿತು ಅನುತಾಪ ಪಡುವವನಾಗಿದ್ದಾನೆ (4:14-16). ಏಕೆ? ಕಾರಣವೇನೆಂದರೆ, “ತಾನು ಶೋಧಿಸಲ್ಪಟ್ಟರೂ, ಪಾಪವಿಲ್ಲದವನಾಗಿದ್ದನು.” ಮನುಷ್ಯ ಸ್ವಭಾವವನ್ನು ಆತನು ಹೊಂದಿರುವದರಿಂದ, ಶೋಧಿತರಾದವರಿಗೆ ಸಹಾಯ ಮಾಡಲು ಶಕ್ತನಾಗಿದ್ದಾನೆ (ಇದನ್ನು ನೋಡಿರಿ 2:17, 18).

ಈ ಮಹಾಯಾಜಕನ ಸ್ವಭಾವವು ನಮ್ಮ ಮೇಲೆ ಯಾವ ವಿಧವಾದ ವರ್ಚಸ್ಸನ್ನು ಬೀರಬಹುದು? ನಮಗೆ ಇಂಥಾ ಶ್ರೇಷ್ಟನಾದ ಮಹಾಯಾಜಕನು ಇರುವದರಿಂದ, ನಾವು ನಂಬಿಕೆಯಲ್ಲಿ ದೃಢವಾಗಿರಬೇಕು (4:14). ಆದ್ದರಿಂದ ಭರವಸದಿಂದ ಆತನ ಕೃಪಾಸಿಂಹಾಸನವನ್ನು ಪ್ರವೇಶಿಸಲು ಸಾಧ್ಯವಿದೆ (4:16).

## ಕ್ರಿಸ್ತನು ಸಹ ದೇವರಿಂದ ನೇಮಕಗೊಂಡ ಮಹಾಯಾಜಕನು

ಎರಡನೆಯದಾಗಿ, ಲೇವಿಯರ ಹಾಗೆಯೇ ಕ್ರಿಸ್ತನೂ ಸಹ ದೇವರಿಂದ ಮಹಾ ಯಾಜಕನಾಗಿ ನೇಮಕಗೊಂಡನು (5:1-11).

ಮೋಶೆಯ ನಿಯಮದ ಪ್ರಕಾರವಿರುವ ಯಾಜಕನು ಎಂದು ಈ ವಾಕ್ಯಭಾಗದಲ್ಲಿ ತಿಳಿಸಲಾಗಿದೆ. 5:1-4ರ ಪ್ರಕಾರ, (1) ಮನುಷ್ಯರ ಪರವಾಗಿ ಕಾರ್ಯಮಾಡಿದರು, (2) ಯಜ್ಞಗಳನ್ನು ಸಮರ್ಪಿಸಿದರು, (3) ಅವರೂ ಸಹ ಬಲಹೀನರಾಗಿದ್ದರಿಂದ ಅವನು "ಜ್ಞಾನವಿಲ್ಲದವರನ್ನು ಮಾರ್ಗ ತಪ್ಪಿನಡೆಯುವವರನ್ನೂ" ತಾಳ್ಮೆಯಿಂದ ಸಹಿಸಿಕೊಳ್ಳುವದಕ್ಕೆ ಶಕ್ತನಾಗಿರುವನು, (4) ಜನರಿಗೋಸ್ಕರ ಹೇಗೋ ಹಾಗೆಯೇ ತನಗೋಸ್ಕರವೂ ಯಜ್ಞಗಳನ್ನು ಸಮರ್ಪಿಸಿಕೊಂಡನು, (5) ಅವರು ದೇವರಿಂದ ನೇಮಕಗೊಂಡಿದ್ದರು. ಅದರಂತೆಯೇ ಯೇಸು ಸಹ ನಮ್ಮ ಯಾಜಕನಾಗಿ (1) ಮನುಷ್ಯರ ಪರವಾಗಿ, (2) ಯಜ್ಞಗಳನ್ನು ಸಮರ್ಪಿಸಿದನು, (3) ಜನರೊಂದಿಗೆ ಅನುತಾಪ ಪಡುತ್ತಾನೆ ಮತ್ತು (4) ದೇವರಿಂದ ನೇಮಕಗೊಂಡಿರುವನು, ಆತನು ಸಹ ಲೇವಿಯ ಯಾಜಕರಂತೆದ್ದರೂ, ತನ್ನ ಪಾಪಕ್ಕಾಗಿ ಯಜ್ಞಗಳನ್ನು ಅರ್ಪಿಸುವ ಅಗತ್ಯವಿರಲಿಲ್ಲ, ಏಕೆಂದರೆ ಆತನು ಪಾಪರಹಿತನು (4:15).

5:1-11ರಲ್ಲಿ, ಆತನು ದೇವರಿಂದ ನೇಮಕವಾದ ಮಹಾಯಾಜಕನು ಎಂಬದು ಪ್ರಮುಖ ಅಂಶವಾಗಿದೆ. 5 ರಿಂದ 7ನೇ ವಚನಗಳಲ್ಲಿ, ಇಬ್ರಿಯ ಬರಹಗಾರನು ಎರಡು ವಾಕ್ಯಭಾಗಗಳನ್ನು ಬಳಸಿರುವನು (ಕೀರ್ತನೆ 2; 110). ಇದರಿಂದ ಆ ಅಂಶವನ್ನು ಊರ್ಜಿತಮಾಡಿದ್ದಾನೆ. ಕ್ರಿಸ್ತನು ದೇವರ ಮಗನಾಗಿದ್ದರೂ - ತನ್ನ ಬಾಧೆಗಳ ಅನುಭವದಿಂದ ವಿಧೇಯತೆಯನ್ನು ಕಲಿತುಕೊಂಡನು. ಮರಣವನ್ನು ಅನುಭವಿಸುವಷ್ಟು ವಿಧೇಯನಾದ ಕಾರಣ ಆತನು ಮಹಾಯಾಜಕನಾಗುವ ಸಾಧ್ಯತೆ ಉಂಟಾಯಿತು. ಈ ವಿಧವಾಗಿ ಆತನು "ವಿಧೇಯರಾಗುವವರಿಗೆ" ರಕ್ಷಕನಾದನು (5:8, 9).

## ಕ್ರಿಸ್ತನ ಮೇಲ್ಕಿಜೆದೇಕನ ತರಹದ ಯಾಜಕನು

ಮೂರನೆಯದಾಗಿ, ಕ್ರಿಸ್ತನು ಮೆಲ್ಕಿಜೆದೇಕನ ತರಹದ ಯಾಜಕತ್ವವನ್ನು ನಡೆಸಿದನು (5:10). ಮೆಲ್ಕಿಜೆದೇಕನನ್ನು ಕುರಿತು ಪ್ರಸ್ತಾಪಿಸಿದ ನಂತರ ಬರಹಗಾರರು ಓದುಗರರಿಗೆ ಒಂದು ಎಚ್ಚರಿಕೆಯ ಮಾತನ್ನು ಬರೆದನು, "ಪೂರ್ಣವಾದ ತಿಳುವಳಿಕೆಗೆ ಸಾಗುತ್ತಾ ಹೋಗೋಣ" (6:1). ಅನಂತರ 7ನೇ ಅಧ್ಯಾಯದಲ್ಲಿ, ಮೇಲ್ಕಿದೇಕನ ಅಂಶವನ್ನು ಮತ್ತೆ ಪ್ರಸ್ಥಾಪಿಸಿದರು , ಆತನ ಬಗ್ಗೆ 5ನೇ ಅಧ್ಯಾಯದಲ್ಲಿ ಪರಿಚಯ ಮಾಡಿದನು (7:1-25 ಓದಿ.) ಈ ಅಸಾಧಾರಣವಾದ ಯಾಜಕನ ಕುರಿತು ಪರಿಶೀಲಿಸೋಣ.

### ಮೇಲ್ಕಿಜೆದೇಕನ ಯಾಜಕತ್ವದ ಗುಣಲಕ್ಷಣಗಳು

ಇಬ್ರಿಯ 7ರಲ್ಲಿ ಮೇಲ್ಕಿಜೆದೇಕನ ಯಾಜಕತ್ವದ ಬಗ್ಗೆ ಹಲವು ವಾಸ್ತವಿಕ ವಿಷಯಗಳನ್ನು ಕಲಿಯೋಣ. ಕ್ರಿಸ್ತು ನೇಮಕವಾದ ಯಾಜಕತ್ವವು ಲೇವಿಯರ ಯಾಜಕತ್ವಕ್ಕೆ ಹೇಗೆ ಭಿನ್ನ ವಾಗಿರುತ್ತದೆ?

*ಸದಾಕಾಲವಿರುವ ಯಾಜಕತ್ವ.* ಹಳೆ ಒಡಂಬಡಿಕೆಯಲ್ಲಿನ ಮೆಲ್ಕಿಜೆದೇಕನ ಚರಿತ್ರೆಯನ್ನು ಇಬ್ರಿಯ 7ರಲ್ಲಿ, ಉಲ್ಲೇಖಿಸಿ ಪ್ರಾರಂಭವಾಗಿದೆ (ನೋಡಿರಿ ಆದಿಕಾಂಡ 14:17-20).

ಮೆಲ್ಕಿಜೆದೇಕನ ಚರಿತ್ರೆಯನ್ನು ಆಕಸ್ಮಾತಾಗಿ ಉಲ್ಲೇಖಿಸಿರುವದರಿಂದ, ಆತನ ವಂಶಾವಳಿ ಹಾಗೂ ಜನನದ ಕುರಿತು ಯಾವುದೇ ದಾಖಲೆಗಳಿರುವದಿಲ್ಲ. "ಆದರೆ ಆತನ ಯಾಜಕತ್ವವು ಇತರರಿಗೆ ಹೋಗುವದಿಲ್ಲ" (7:3). ಯೇಸುವಿನ ಯಾಜಕತ್ವವನ್ನು ಲೇವಿಯರಿಗೆ ಹೋಲಿಸುವದಾದರೆ, "ಯೇಸುವಿನ ಯಾಜಕತ್ವ ಸದಾಕಾಲವಿರುತ್ತದೆ" (7:23, 24).

*ಒಂದು ಉತ್ತಮವಾದ ಯಾಜಕತ್ವವಾಗಿದೆ.* ಮೋಶೆಯ ನಿಯಮಗಳ

ಪ್ರಕಾರವಾಗಿದ್ದ ಲೇವಿಯರ ಯಾಜಕತ್ವಕ್ಕಿಂತಲೂ, ಯೇಸುವಿನ ಯಾಜಕತ್ವವು ಮೆಲ್ಕಿಜೆದೇಲೀಕನ ಯಾಜಕತ್ವದಂತಿದೆ ಎಂದು ಬರಹಗಾರನು ಸಿದ್ಧಾಂತಪಡಿಸಿರುವನು. ಅಬ್ರಹಾಮನು ಮೆಲ್ಕಿಜೆದೇಕನಿಗೆ, ದಶಮಾಂಶವನ್ನು ನೀಡಿದನು (7:4). ಅಬ್ರಹಾಮನ ವಂಶದವರಾದ ಲೇವಿ ಯರಿಗೂ ಇಸ್ರಾಯೇಲ್ಯರು ದಶಮಾಂಶವನ್ನು ನೀಡಿದರು. ದಶಮಾಂಶವನ್ನು ಪಡೆದ ಲೇವಿ ಯರು. ಸಹ ದಶಮಾಂಶವನ್ನು (ಅವರ ತಂದೆಯಾದ ಅಬ್ರಹಾಮನ ಮೂಲಕ) ಮೆಲ್ಕಿಜೆದೇಕನಿಗೆ ನೀಡಿದರು, ಆದ್ದರಿಂದ ಮೆಲ್ಕಿಜೆದೇಕನು ಲೇವಿಯರಿಗಿಂತಲೂ ಶ್ರೇಷ್ಟನೆಂದು ಸಾಭೀತು ಮಾಡಲಾಗಿದೆ (7:4-10). ಈ ಪಾಠದ ವಿವರಣೆಯಿಂದ, ಕ್ರಿಸ್ತನು ಲೇವಿಯರಿಗಿಂತ ಶ್ರೇಷ್ಟನು ಎಂದು ಅರಿಯಬೇಕಾಗುತ್ತದೆ.

*ಭಿನ್ನವಾದ ಯಾಜಕತ್ವ.* 7:11ರಲ್ಲಿ, ಮೇಲ್ಕಿಜೆದೇಕನ ತರಹದ ಯಾಜಕನ ಆಗಮನವನ್ನು ದಾವೀದನು ಮುಂದಾಗಿ ತಿಳಿಸಿರುವದರಿಂದ, ಮೋಶೆಯ ನಿಯಮವು ಪರಿಪೂರ್ಣವಲ್ಲ ಎಂದು ತಿಳಿದು ಬರುತ್ತದೆ. ಒಂದು ವೇಳೆ ಆ ನಿಯಮವು ಪರಿಪೂರ್ಣವಾಗಿದ್ದಿದ್ದರೆ, ಮೇಲ್ಕಿಜೆದೇಕನ ತರಹದ ಮತ್ತೊಬ್ಬ ಯಾಜಕನ ಅಗತ್ಯತೆ ಇರಲಿಲ್ಲ.

ಆದ್ದರಿಂದ ಯೇಸುವಿನ ಯಾಜಕತ್ವವು ಯಾಜಕರ ಯಾಜಕತ್ವಕ್ಕಿಂತ ವಿಭಿನ್ನವಾಗಿದೆ. ಕ್ರಿಸ್ತನು ಬೇರೆ ಕುಲದಲ್ಲಿ ಹುಟ್ಟಿದವನು (7:13, 14); ಆದಾಗ್ಯೂ ಆತನು ಯಾಜಕನಾದನು, ಆತನು ಶರೀರ ಧರ್ಮ ವಿಷಯವಾದ ನಿಯಮದ ಪ್ರಕಾರವಾಗಿರದೆ (7:16). ಮೆಲ್ಕಿಜೆದೇಕನ ಸಾದೃಶ್ಯದಲ್ಲಿ ನಿರ್ಲಯವಾದ ಜೀವದ ಶಕ್ತಿವುಳ್ಳವನಾಗಿದ್ದು, ಆಣೆಯಿಂದ ಯಾಜಕನಾಗಿದ್ದಾನೆ (7:20, 21).

*ಈ ವಿಧವಾದ ಯಾಜಕನು ಆತನೊಬ್ಬನೇ.* ಆತನ ಯಾಜಕತ್ವ ಒಂದೇಯಾಗಿದೆ. ಹಳೆ ಒಡಂಬಡಿಕೆಯ ಯಾಜಕತ್ವದಲ್ಲಿ, "ಲೇವಿಯರು ಶಾಶ್ವತವಾಗಿ ಉದ್ಯೋಗ ನಡೆಸುವದಕ್ಕೆ ಮರಣವು ಅಡ್ಡಿಯಾದದ್ದರಿಂದ, ಅವರಲ್ಲಿ ಯಾಜಕರಾದವರು ಅನೇಕರು" (7:23). ಹೊಸ ಒಡಂಬಡಿಕೆಯ ಕ್ರಮದಂತೆ ಕ್ರಿಸ್ತನು ಮಾತ್ರ ಒಬ್ಬನೇ ಮಹಾಯಾಜಕನಾಗಿರುವನು.

**ಕ್ರಿಸ್ತನ ಉತ್ತಮವಾದ ಯಾಜಕತ್ವದಿಂದ ಉಂಟಾಗುವ ಪರಿಣಾಮಗಳು**

ಲೇವಿಯ ವಂಶವನ್ನು ಹೊರತುಪಡಿಸಿ, ಮೆಲ್ಕಿಜೆದೇಕನ ತರಹದ ಕ್ರಿಸ್ತನ ಯಾಜಕತ್ವದಿಂದ ಉಂಟಾಗುವ ಪರಿಣಾಮಗಳೇನು? ಇಬ್ರಿಯ 7ರಲ್ಲಿ, ಎರಡು ಪರಿಣಾಮಗಳನ್ನು ಉಲ್ಲೇಖಿಸ ಲಾಗಿದೆ.

*ಒಂದು ಉತ್ತಮವಾದ ಒಡಂಬಡಿಕೆ.* ಕ್ರಿಸ್ತನು ತಾನೇ ನಮ್ಮ ಮಹಾಯಾಜಕ ನಾಗಿರುವದರಿಂದ, ಲೇಮಿಯ ಯಾಜಕತ್ವಕ್ಕೂ, ಈತನ ನಡುವೆ ವ್ಯತ್ಯಾಸವು ಇರುತ್ತದೆ ಎಂದು ಬರಹಗಾರನು ಆಗಾಗ್ಗೆ ತಿಳಿಸಿರುವನು. (1) ಯಾಜಕತ್ವವು ಬೇರೆಯಾದರೆ, ಧರ್ಮಶಾಸ್ತ್ರ ಕೂಡ ಬೇರೆಯಾಗುವದು ಅಗತ್ಯ (7:12). (2) "ಹಳೆಯ ನಿಯಮಾವಳಿ" "ವ್ಯರ್ಥವಾದದ್ದು, ನಿರ್ಭಲವಾಗಿದ್ದರಿಂದ" ಅದು ರದ್ದಾಗಿ (ಯಾಕೆಂದರೆ ಧರ್ಮಶಾಸ್ತ್ರ ಯಾವುದನ್ನು ಪರಿಪೂರ್ಣಗೊಳಿಸಲಿಲ್ಲ) ಉತ್ತಮವಾಗಿರುವ ನಿರೀಕ್ಷಾ ದಾರವು ಪ್ರಾಬಲ್ಯಕ್ಕೆ ಬಂತು (7:18, 19). (3) "ಯೇಸುವಿನ ಶ್ರೇಷ್ಟವಾದ ಒಡಂಬಡಿಕೆಗೆ ಹೊಣೆಗಾರನು" (7:22). ಕ್ರಿಸ್ತನ ಯಾಜಕತ್ವದಲ್ಲಿರುವ ಶ್ರೇಷ್ಟವಾದ ಒಡಂಬಡಿಕೆಗೆ ದೇವರಿಗೆ ಸ್ತೋತ್ರ ಮಾಡೋಣ!

*ರಕ್ಷಣೆಯ ಲಭ್ಯತೆ.* ಇಬ್ರಿಯ 7:25ರಲ್ಲಿ, ಕ್ರಿಸ್ತನ ನಿರಂತರವಾದ ಯಾಜಕತ್ವದ ಕುರಿತು ಮುಂದುವರೆಸಿ "ಆದಕಾರಣ ಆತನು ತನ್ನ ಮೂಲಕ ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವದಕ್ಕೆ ಶಕ್ತನಾಗಿದ್ದಾನೆ; ಅವರಿಗೋಸ್ಕರ ವಿಜ್ಞಾಪನೆ ಮಾಡುವದಕ್ಕೆ ಯಾವಾಗಲೂ ಬದುಕುವವನಾಗಿದ್ದಾನೆ" ನಮಗೆ ರಕ್ಷಣೆಯನ್ನು ದಯಪಾಲಿಸಲು ನಿರಂತರ ವಾಗಿ ಜೀವಿಸಿರುವ ಕ್ರಿಸ್ತನು ಎಂಬ ಮಹಾಯಾಜಕನಿಗಾಗಿ ಕೃತಜ್ಞರಾಗಿರೋಣ.

## ನಮ್ಮ ಪಾಪಗಳಿಗಾಗಿ ಕ್ರಿಸ್ತನು ಪರಿಪೂರ್ಣವಾದ ಯಜ್ಞವನ್ನು ಸಮರ್ಪಿಸಿರುವನು

ನಾಲ್ಕನೆಯದಾಗಿ, ನಮ್ಮ ಮಹಾಯಾಜಕನು ನಮ್ಮ ಪಾಪಗಳಿಗಾಗಿ ಪರಿಪೂರ್ಣವಾದ ಯಜ್ಞವನ್ನು ಸಮರ್ಪಿಸಿರುವನು (7:26-28). ಈ ವಾಕ್ಯದಲ್ಲಿ ಹಳೆಯ ಹಾಗೂ ಹೊಸ ಒಡಂಬಡಿಕೆಯ ನಡುವೆ ಇರುವ ವ್ಯತ್ಯಾಸವನ್ನು ಕಾಣುತ್ತೇವೆ: (1) ಹಳೆಯ ಒಡಂಬಡಿಕೆಯ ಯಾಜಕರು ನಿರ್ಭಲಾವಸ್ಥೆಯಲ್ಲಿದ್ದರು (5:2; 7:28), ಆದರೆ ಕ್ರಿಸ್ತನು "ಪರಿಶುದ್ಧನು, ನಿಷ್ಕಳಂಕನು, ನಿರ್ದೋಷಿಯು ಆಗಿದ್ದು ಪಾಪಿಗಳಿಂದ ಪ್ರತ್ಯೇಕವಾಗಿದ್ದು, ಆಕಾಶಮಂಡಲಗಳಿಗಿಂತ ಉನ್ನತದಲ್ಲಿರುವವನೂ ಆಗಿರುವನು" (7:26). ಮತ್ತು ಸದಾಕಾಲ ಪರಿಪೂರ್ಣನಾಗಿರುವನು (7:28). (2) ಲೇವಿಯರು ತಮಗಾಗಿ ಯಜ್ಞವನ್ನು ಅರ್ಪಿಸಬೇಕಿತ್ತು (5:3). ಕ್ರಿಸ್ತನು ಪಾಪರಹಿತನಾಗಿದ್ದರಿಂದ ಅದರ ಅಗತ್ಯತೆ ಇರಲಿಲ್ಲ (3) ಹಳೆ ಒಡಂಬಡಿಕೆಯ ಪ್ರಕಾರ ಪ್ರತಿನಿತ್ಯವು ಯಜ್ಞವನ್ನು ಸಮರ್ಪಿಸಬೇಕಿತ್ತು. ಆದರೆ ಕ್ರಿಸ್ತನು, ಒಂದೇ ಸಾರಿ ಸಮರ್ಪಿಸಿದನು. (4) ಲೇವಿಯರು ಪ್ರಾಣಿಗಳನ್ನು ವಧಿಸಿದರೆ, ಕ್ರಿಸ್ತನು ತನ್ನನೇ ಸಮರ್ಪಿಸಿದನು (9:11-14; 9:28).

ಯೇಸುವಿನ ಯಾಜಕತ್ವದ ಅಂಶವು ಯಾವ ಅರ್ಥವನ್ನು ನೀಡುತ್ತದೆ? ಹಳೆ ಒಡಂಬಡಿಕೆಯಿಂದ ದೊರೆಯಲಾರದ ಪಾಪಕ್ಷಣೆಯ ಕ್ರಿಸ್ತನ ಯಜ್ಞದಿಂದ ಲಭ್ಯವಾಗುತ್ತದೆ ಎಂದು ತಿಳಿಸುತ್ತದೆ! ಆತನು ನಮ್ಮ ಪಾಪಗಳನ್ನು ಒಂದೇ ಸಾರಿ ನಿವಾರಣೆ ಮಾಡಿರುವದರಿಂದ, ನಾವು ಪಾಪದಲ್ಲಿ ಮುಂದುವರೆಯುವದು ಅನಗತ್ಯ!

## ಕ್ರಿಸ್ತನು ಇನ್ನು ಸಹ ನಮ್ಮ ಮಹಾಯಾಜಕನಾಗಿ ಮುಂದುವರೆದಿದ್ದಾನೆ

ಐದನೆಯದಾಗಿ, ಆತನು ಇನ್ನೂ ಸಹ ಯಜಕೋದ್ಯೋಗವನ್ನು ನಡೆಸುತ್ತಿದ್ದಾನೆ (8:1, 2). ಆತನು ಪರಲೋಕದೊಳಗೆ ದೇವರ ಸಿಂಹಾಸನದ ಬಲಗಡೆಯಲ್ಲಿ ಅಸನಾರೂಢನಾಗಿದ್ದು ನಮಗಾಗಿ ಯಜಕೋದ್ಯೋಗವನ್ನು ಮಾಡುತ್ತಿದ್ದಾನೆ. ಆದ್ದರಿಂದ *ನಾವುಗಳು ದೇವರ ಬಳಿಗೆ ಧೈರ್ಯವಾಗಿ ಪ್ರವೇಶಿಸಬಹುದೆಂಬ ಸೂಚನೆಯನ್ನು ಗಮನಿಸುತ್ತೇವೆ* 7:25ರಲ್ಲಿ, ನಮಗಾಗಿ ವಿಜ್ಞಾಪನೆ ಮಾಡಲು ಯಾವಾಗಲೂ ಬದುಕುವವನಾಗಿದ್ದಾನೆ.

## ಮುಕ್ತಾಯ

ಪರಲೋಕಕ್ಕೆ ಹೋಗಲು ನಮಗೆ ಸಹಾಯದ ಅಗತ್ಯವಿದೆ! ನಾವು ನಿರ್ಬಲರೂ ಹಾಗೂ ಪಾಪಿಗಳೂ ಆಗಿರುವದರಿಂದ, ಅದನ್ನು ಸಾಧಿಸಲು ಅಸಮರ್ಥರಾಗಿದ್ದೇವೆ. ಆದರೆ ಯೇಸು ಕ್ರಿಸ್ತನು ಮಹಾಯಾಜಕನಾಗಿರುವದರಿಂದ ಆತನು ನಮಗಾಗಿ ವಿಜ್ಞಾಪನೆ ಮಾಡಲು ಸದಾ ಇರುವದರಿಂದ, ಈತನ ಮೂಲಕವಾಗಿಯೇ ದೇವರ ಬಳಿ ಬರಲು ಸಾಧ್ಯವಿದೆ ಎಂದು ಭರವಸದಿಂದ ಇರೋಣ.

ಕ್ರಿಸ್ತನು ನಿನ್ನ ಮಹಾಯಾಜಕನಾಗಿದ್ದಾನೆಯೋ? ನೀನು ಹೊಸ ಒಡಂಬಡಿಕೆಗೆ ಒಳಗಾಗಿ ನಿನ್ನ ಜೀವಿತವನ್ನು ಆತನ ಕೈಗಳಿಗೆ ಒಪ್ಪಿಸದೇ ಹೋದರೆ, ಆತನು ನಿನ್ನ ಮಹಾಯಾಜಕನಾಗಿರುವದಿಲ್ಲ, ಮತ್ತು ಪರಲೋಕಕ್ಕೆ ಹೋಗುವ ಅವಕಾಶವನ್ನು ಕಳಕೊಂಡಿರುವಿ. ಆತನು ನಿನ್ನ ಮಹಾಯಾಕನಾಗಬೇಕಿದ್ದರೆ, ನೀನು ಆತನಿಗೆ ವಿಧೇಯನಾಗಬೇಕು (ಇಬ್ರಿಯ 5:8, 9). ಆತನ ಚಿತ್ತವನ್ನು ನೆರವೇಲಿಸಬೇಕು. ನಂಬಿಕೆಯಿಂದ ಆತನ ಆಜ್ಞೆಗಳಿಗೆ ವಿಧೇಯನಾಗು (ಯೋಹಾನ 8:24). ಮಾನಸಾಂತರಪಡು (ಲೂಕ 13:3), ನಂಬಿಕೆಯನ್ನು ಅರಿಕೆ ಮಾಡು (ಮತ್ತಾಯ 10:32). ನಂತರ ದೀಕ್ಷಾಸ್ನಾನ ಮಾಡಿಸಿಕೋ (ಮಾರ್ಕ 16:16; ಮತ್ತಾಯ 28:19, 20). ನೀನು ಇದನ್ನು ಮಾಡುವಾಗ, ಕ್ರಿಸ್ತನ ಪರಿಪೂರ್ಣವಾದ ಯಜ್ಞದ ಮುಖಾಂತರ ರಕ್ಷಿಸಲ್ಪಡುವಿ, ಆಗ ಕ್ರಿಸ್ತನು

ನಿನ್ನ ಮಹಾಯಾಜಕನಾಗಿ, ನೀನು ಪರಲೋಕ ಸೇರಲು ಸಹಾಯಿಸುತ್ತಾನೆ.

---

**ಟಿಪ್ಪಣಿ**

[1]ಇಬ್ರಿಯ 1ರ ಸಾರಾಂಶವನ್ನು 5 ರಿಂದ 7ನೇ ಅಧ್ಯಾಯದಲ್ಲಿ ಮುಂದುವರೆಸಿದೆ. ಹಾಗೂ ಮಹಾಯಾಜಕನ ವೃತ್ತಿಯ ಬಗೆಗಿನ ಉದಾಹರಣೆಯನ್ನು ಪೂರ್ತಿಯಾಗಿ ಇಬ್ರಿಯ ಪುಸ್ತಕದಲ್ಲಿ ವಿವರಿಸಲಾಗಿದೆ. ಇಬ್ರಿಯ 1:3; 2:17; 3:1; 4:14; 15: 8:1-4; 10:11, 12.